ಬೇಲೂರು ಪಟ್ಟಣಕ್ಕೆ ನೀರಂ ಒದಗಿಸಂವ ಬಗ್ಗೆ

೨೭೦೪. ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

(ಅ) ಹಾಸನ ಜಿಲ್ಲೆ, ಬೇಲೂರು ಪಟ್ಟಣಕ್ಕೆ ಕುಡಿಯುವ ನೀರಿಗೆ ತೀವ್ರ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ:

(ಆ) ಈ ಬಗ್ಗೆ ಮೂರು ವರ್ಷಗಳ ಹಿಂದೆ ನೀರು ಒದಗಿಸಲು ೧೨ ಲಕ್ಷ ರೂಗಳ ಅಂದಾಜಿನ ಪಟ್ಟಿ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ:

(ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

(ಅ) ಅಭಾವವಿರುವುದಿಲ್ಲ.

(ಆ) ಇಲ್ಲಾ

(ಇ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳನ್ನು ಅಂದರೆ ಳಿನೇ ಪಟ್ಟಿಯನ್ನು ಸದನದ ಮುಂದೆ ಇಡುತ್ತೇನೆ.

ಗ್ರಾಮೀಣಾಭಿವೃದ್ಧಿ ಸೌಲಭ್ಯ ದೊರಕದ ಪುರಸಭೆಗಳ ಬಗ್ಗೆ

೨೩೫೭. ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

(ಅ) ಮಂಡಲ ಪಂಚಾಯಿತಿಗಳನ್ನು ರಚಿಸುವಾಗ ೧೯೭೧ರ ಜನಗಣತಿ ಪ್ರಕಾರ, ೧೨,೫೦೦ ಜನ ಸಂಖ್ಯೆಗೊಂದರಂತೆ ಎಂದಿದ್ದ ಸಾಮಾನ್ಯ ನಿಯಮವನ್ನು ಪುರಸಭೆಗಳನ್ನು ಮಂಡಲ ಪಂಚಾಯಿತಿ ಆಗಿ ಪರಿವರ್ತಿಸುವಾಗ ಅನುಸರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬರೇ ಜನಸಂಖ್ಯೆಯ ಆಧಾರದ ಮೇಲೆ ರೂಪಿತವಾದ, ಪಟ್ಟಣ ಪ್ರದೇಶವಲ್ಲದ ನಾಗರೀಕ ಸೌಲಭ್ಯಗಳಲ್ಲದ ಕೃಷಿ ಭೂಮಿ, ಅರಣ್ಯ ಹೆಚ್ಚಿಗೆ ಇರುವಂಥ ಪ್ರದೇಶದ ಪುರಸಭೆಗಳು ಗ್ರಾಮೀಣಾಭಿವೃದ್ಧಿಯ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

(ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳಾವುವು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

(ಅ) ೧೯೭೧ನೇ ಜನಗಣತಿ ಪ್ರಕಾರ ೧೦,೦೦೦ಕ್ಕೂ ಒಳಗಿನ ಜನಸಂಖ್ಯೆ ಇರುವ ಪುರಸಭೆಗಳನ್ನು ಪೂರ್ವಾಪೇಕ್ಷಿತಾತ್ಮಕ ದೃಷ್ಟಿಯಿಂದ ಮಂಡಲ ಪಂಚಾಯಿತ್‌ಗಳನ್ನಾಗಿ ಪರಿವರ್ತಿಸಲಾಗಿದೆ.

(ಆ) ಇಲ್ಲ.

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.